**ದಿನಾಂಕ 11–03–2022 ರಂದು ಬೆಳಿಗ್ಗೆ 11.30 ಗಂಟೆಗೆ ಕುಲಪತಿಗಳ ಸಭಾಂಗಣ, ಕೃವಿವಿ., ರಾಯಚೂರಿನಲ್ಲಿ ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯ ನಡಾವಳಿಗಳು: (ಪರಿಷ್ಕೃತ)**

**ಉಪಸ್ಥಿತರು:**

| | | | |
|---|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು | ಭೌತಿಕ |
| 2. | ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 3. | ಶ್ರೀ ಸದಾನಂದ ಎಸ್. ಪವಾಸ್ಕರ್, ಸರ್ಕಾರದ ಉಪ–ಕಾರ್ಯದರ್ಶಿಗಳು, ಕೃಷಿ ಇಲಾಖೆ (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 4. | ಶ್ರೀ ಕೊಟ್ರೇಶಪ್ಪ ಬಿ. ಕೋರಿ, ರಾಯಚೂರು | ಸದಸ್ಯರು | ಭೌತಿಕ |
| 5. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು | ಭೌತಿಕ |
| 6. | ಶ್ರೀ ಮಹಾಂತೇಶ್‌ಗೌಡ ಪಾಟೀಲ್, ಕೊಪ್ಪಳ | ಸದಸ್ಯರು | ಭೌತಿಕ |
| 7. | ಶ್ರೀ ಜಿ. ಶ್ರೀಧರ ಕೆಸರಹಟ್ಟಿ, ಗಂಗಾವತಿ | ಸದಸ್ಯರು | ಭೌತಿಕ |
| 8. | ಶ್ರೀ ಸುನಿಲ್, ರಾಯಚೂರು | ಸದಸ್ಯರು | ಭೌತಿಕ |
| 9. | ಡಾ. ಎಂ.ಜಿ. ಪಾಟೀಲ್, ಶಿಕ್ಷಣ ನಿರ್ದೇಶಕರು, ಕೃವಿವಿ., ರಾಯಚೂರು | ಆಹ್ವಾನಿತರು | ಭೌತಿಕ |
| 10. | ಡಾ. ಸುರೇಶ್ ಎಸ್. ಪಾಟೀಲ್, ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಕಲಬುರಗಿ | ಸದಸ್ಯರು | ಭೌತಿಕ |
| 11. | ಡಾ. ಎಂ. ವೀರನಗೌಡ, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ | ಭೌತಿಕ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ವರ್ಚುವಲ್ ಹಾಗೂ ಭೌತಿಕವಾಗಿ ಹಾಜರಿದ್ದ ಎಲ್ಲಾ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳನ್ನು ಸ್ವಾಗತಿಸಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| **ಐಟಂ–1** | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 50ನೇ ಸಭೆಯ ಮತ್ತು ಪರಿಚಲನಾ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸುವುದು.**<br>**ಠರಾವು:**<br>ದಿನಾಂಕ 27–11–2021 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 50ನೇ ಸಭೆಯ ಮತ್ತು ಪರಿಚಲನಾ ಸಭೆಗಳ ನಡುವಳಿಗಳನ್ನು ಸ್ಥಿರೀಕರಿಸಲಾಯಿತು.<br>**(ಕ್ರಮ : ಕುಲಸಚಿವರು)** |
| **ಐಟಂ–2** | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 50ನೇ ಸಭೆಯ ನಡುವಳಿಗಳ ಮತ್ತು ಪರಿಚಲನಾ ಕಾರ್ಯಸೂಚಿಯ ನಡುವಳಿಗಳನುಸಾರ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**<br>**ಠರಾವು:**<br>ದಿನಾಂಕ 20–11–2019 ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 50ನೇ ಸಭೆಯ ಮತ್ತು ಪರಿಚಲನಾ ಕಾರ್ಯಸೂಚಿಯ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು.<br>**(ಕ್ರಮ : ಕುಲಸಚಿವರು)** |

**ಐಟಂ–3** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸಕ್ರಮಾತಿಗೊಂಡ ಎಂ.ಆರ್.ಇ. ನೌಕರರ ವೇತನವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲು ಅನುಮೋದನೆ ನೀಡುವ ಕುರಿತು.**

**ಠರಾವು:**

ಚರ್ಚೆಯ ನಂತರ, 162 ಎಂ.ಆರ್.ಇ. ನೌಕರರ ಸಕ್ರಮಾತಿ ಕುರಿತಾಗಿ ಆರ್ಥಿಕ ಇಲಾಖೆಯವರ ಆಕ್ಷೇಪಣೆ ಇತ್ಯರ್ಥವಾಗುವ / ಸಹಮತಿ ನೀಡುವವರೆಗೂ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಕ್ರಮಾತಿಗೊಂಡ 162 ನೌಕರರ ವೇತನವನ್ನು ಸರ್ಕಾರದಿಂದ ದಿನಗೂಲಿ ಅನುದಾನವಾಗಿ ಬಿಡುಗಡೆಗೊಳಿಸುತ್ತಿರುವ ಅನುದಾನವನ್ನು ಉಪಯೋಗಿಸಿಕೊಂಡು ಮತ್ತು ಉಳಿದ ಕೊರತೆ ಅನುದಾನವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, 162 ಎಂ.ಆರ್.ಇ. ನೌಕರರ ಸಕ್ರಮಾತಿ ಕುರಿತಾಗಿ ವಿವರವಾದ ಪ್ರಸ್ತಾವನೆಯನ್ನು ಸೂಕ್ತ ಸಮರ್ಥನೆಯೊಂದಿಗೆ ಆರ್ಥಿಕ ಇಲಾಖೆಗೆ ಮತ್ತೊಮ್ಮೆ ಸಲ್ಲಿಸಲು ಸಭೆಯು ನಿರ್ಣಯಿಸಿತು.

**(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)**

**ಐಟಂ–4** **ಕಲಬುರಗಿಯಲ್ಲಿ ಕಲ್ಯಾಣ ಸೌಧ ನಿರ್ಮಾಣಕ್ಕಾಗಿ ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿಯ 15 ಎಕರೆ ಜಮೀನು ಒದಗಿಸುವ ಕುರಿತು.**

**ಠರಾವು:**

ದೀರ್ಘ ಚರ್ಚೆಯ ನಂತರ, ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ ನಗರದ ಆಳಂದ ಚೆಕ್ ಪೋಸ್ಟ್ ಹತ್ತಿರವಿರುವ ಜಮೀನಿನಲ್ಲಿ 15 ಎಕರೆ ಜಮೀನು ಮಂಜೂರು ಮಾಡುವಂತೆ ಶ್ರೀ ದತ್ತಾತ್ರೇಯ ಸಿ ಪಾಟೀಲ ರೇವೂರ, ಅಧ್ಯಕ್ಷರು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಹಾಗೂ ಶಾಸಕರು, ಕಲಬುರಗಿ (ದಕ್ಷಿಣ) ಮತಕ್ಷೇತ್ರ ಇವರ ಹಾಗೂ ಸರ್ಕಾರದ ಪ್ರಸ್ತಾವನೆಯನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ 2009 ರ ಕಲಂ 12 (2) (iii) ರ ಪ್ರದತ್ತವಾದ ಅಧಿಕಾರದನ್ವಯ ಪರಿಶೀಲಿಸಲಾಗಿ, ಪ್ರಸ್ತುತ ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿಯಲ್ಲಿ ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಜಮೀನಿನ ಕೊರತೆ ಇದ್ದು, ಕಲಬುರಗಿಯಲ್ಲಿ ಕಲ್ಯಾಣ ಸೌಧ ನಿರ್ಮಾಣಕ್ಕಾಗಿ 15 ಎಕರೆ ಜಮೀನು ನೀಡುವ ಪ್ರಸ್ತಾವನೆಗೆ ಮಂಡಳಿಯು ಸಹಮತಿ ನೀಡಲಿಲ್ಲ.

**(ಕ್ರಮ : ಕುಲಸಚಿವರು / ಸಂಶೋಧನಾ ನಿರ್ದೇಶಕರು)**

**ಐಟಂ–5** **ಕೃವಿವಿ., ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

**ಮಾನ್ಯತೆ ಹೊಂದಿದ ಆಸ್ಪತ್ರೆಗಳಲ್ಲಿ** ಈ ಕೆಳಕಂಡ ಸಿಬ್ಬಂದಿಯ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಠರಾಯಿಸಿತು :

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು –ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1. | ಡಾ.ಯೇಸಪ್ಪ ಎಲ್<br>ಸಹಾಯಕ ಪ್ರಾಧ್ಯಾಪಕರು (ಭೌತಶಾಸ್ತ್ರ)<br>ಕೃತಾಂ.ಮ ರಾಯಚೂರು | 69,943=00 |
| 2. | ಡಾ. ಸರೋಜಾ ನರಸಿಂಗ ರಾವ್<br>ಸಹಾಯಕ ಪಾಧ್ಯಾಪಕರು (ಜೈವಿಕ ರಸಾಯನಶಾಸ್ತ್ರ )<br>ಪೀಡನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯ ಕೃವಿವಿ., ರಾಯಚೂರು | 87,363=00 |

| | | |
|---|---|---|
| 3. | ಡಾ. ಮಂಜುನಾಥ ಭಾನುವಳ್ಳಿ<br>ಸಹಾಯಕ ಪಾಧ್ಯಾಪಕರು<br>(ಮಣ್ಣು ವಿಜ್ಞಾನ ಹಾಗೂ ಕೃಷಿ ರಸಾಯನ ಶಾಸ್ತ್ರ)<br>ಕೃಷಿ ವಿಸ್ತರಣಾ ಶಿಕ್ಷಣ ಘಟಕ, ಹೂವಿನ ಹಡಗಲಿ | 72,262=00 |
| 4. | ಶ್ರೀ ಮೆಹಬೂಬ<br>ಹಿರಿಯ ಪ್ರಯೋಗಶಾಲಾ ಸಹಾಯಕ<br>ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು | 66,599=00 |
| 5. | ಡಾ. ಶ್ಯಾಮರಾವ್ ಕುಲಕರ್ಣಿ<br>ಸಹಾಯಕ ಪ್ರಾಧ್ಯಾಪಕರು (ಬೇಸಾಯ ಶಾಸ್ತ್ರ ವಿಭಾಗ)<br>ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ | 1,29,132/- |
| 6. | ಶ್ರೀ. ರೇಣುಕಾಪ್ರಸಾದ್ ಬಿ.ಎಸ್<br>ಸಹಾಯಕರು<br>ಸಂಶೋಧನಾ ನಿರ್ದೇಶನಾಲಯ, ಕೃವಿವಿ., ರಾಯಚೂರು | 1,38,485/- |
| 7 | ಡಾ॥ ಜಯರಾಮ ನಾಯ್ಕ, ಎನ್<br>ಪ್ರಯೋಗಾಲಯ ಸಹಾಯಕರು,<br>ಕೃಷಿ ಮಹಾವಿದ್ಯಾಲಯ, ರಾಯಚೂರು. | 1,32,448/- |
| 8. | ಶ್ರೀ. ಚನ್ನಮಲ್ಲಯ್ಯ ಸ್ವಾಮಿ<br>ಕೃಷಿ ಕಾರ್ಮಿಕ<br>ಕೃಷಿ ಸಂಶೋಧನಾ ಕೇಂದ್ರ, ಬೀದರ | 1,49,264/- |
| 9. | ಶ್ರೀಮತಿ. ಯಲ್ಲಮ್ಮ ಗಂಡ ಭೀಮಣ್ಣ<br>ಕೃಷಿ ಕಾರ್ಮಿಕಳು<br>ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ | 1,25,457/- |
| 10. | ಡಾ. ಇಮ್ತಿಯಾಜ್ ಅಹ್ಮದ್ ಕೆ.,<br>ಕಿರಿಯ ತಳಿ ತಜ್ಞ<br>ಬೀಜ ಘಟಕ, ಕೃವಿವಿ., ರಾಯಚೂರು. | 1,26,448/- |
| 11. | ಶ್ರೀ. ರಾಜಶೇಖರ<br>ಕೃಷಿ ಕಾರ್ಮಿಕರು (ಕ್ಷೇತ್ರ ವಿಭಾಗ )<br>ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು. | 1,50,331/- |

ಮುಂದುವರೆದು, ಈ ಕೆಳಕಂಡ ಸಿಬ್ಬಂದಿಯವರು **ಸರಕಾರ / ಕೃವಿವಿ.,ದಿಂದ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಪಡೆದು ಸಲ್ಲಿಸಲಾದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು** ವೈದ್ಯಕೀಯ ಅಟೆಂಡೆನ್ಸ್ ನಿಯಮಾವಳಿಗಳನ್ವಯ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರು ಪರಿಶೀಲಿಸಿ ಮೇಲುರುಜುಗೊಂಡ ಮೊತ್ತದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ತನ್ನ ಅನುಮೋದನೆ ನೀಡಿತು :

| **ಕ್ರ.ಸಂ.** | **ಸಿಬ್ಬಂದಿಯವರ ವಿವರ** | **ವೈದ್ಯಕೀಯ ವೆಚ್ಚ ಮರು - ಪಾವತಿಸಬೇಕಾದ ಮೊತ್ತ (ರೂ.)** |
|---|---|---|
| 1. | ಶ್ರೀ. ಜಂಬಣ್ಣ<br>ಲಘುವಾಹನ ಚಾಲಕರು<br>ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ. | 12,645=00 |

| | | | |
|---|---|---|---|
| | 2. | ಶ್ರೀ. ಸೋಮಪ್ಪ<br>ಟೆಲಿಫೋನ ಆಪರೇಟರ್<br>ಆಸ್ತಿ ವಿಭಾಗ ಕೃವಿವಿ., ರಾಯಚೂರು | 12,645=00 |
| | 3. | ಶ್ರೀ. ರವೀಂದ್ರ<br>ಟೆಲಿಫೋನ ಆಪರೇಟರ್<br>ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ. | 12,645=00 |
| | 4. | ಶ್ರೀ. ವೈಜಿನಾಥ ಸಿದ್ರಾಮಪ್ಪ ಕೋಡಗೆ<br>ಸಹಾಯಕರು<br>ಕೃಷಿ ಸಂಶೋಧನಾ ಕೇಂದ್ರ ಬೀದರ | 32,035=00 |
| | 5. | ಶ್ರೀ. ಮಹಮ್ಮದ ರಜಾಕ ಸುತಾರ<br>ಸಹಾಯಕ<br>ಕೃಷಿ ಸಂಶೋಧನಾ ಕೇಂದ್ರ ಮಾಳನೂರು | 10,903=00 |
| | 6 | ಶ್ರೀ. ಪ್ರಶಾಂತ<br>ಹಿರಿಯ ಸಹಾಯಕರು<br>ಸರಕು ಖರೀದಿ ಕಛೇರಿ ಕೃವಿವಿ., ರಾಯಚೂರು | 12,645=00 |
| | 7. | ಶ್ರೀ. ಸತೀಶ್ ಕುಮಾರ ಕಾಳೆ<br>ವಿಜ್ಞಾನಿ (ತೋಟಗಾರಿಕೆ)<br>ಕೃಷಿ ವಿಜ್ಞಾನ ಕೇಂದ್ರ ಕವಡಿಮಟ್ಟಿ. | 12,645=00 |
| | 8. | ಶ್ರೀಮತಿ. ಪಾರಿಜಾತ ಎಸ್<br>ಅಧೀಕ್ಷಕರು (ಲೆಕ್ಕ)<br>ಹ.ನಿ. ಕಛೇರಿ, ಕೃವಿವಿ., ರಾಯಚೂರು. | 50,000=00 |
| | 9. | ಶ್ರೀ. ಮಲ್ಲಿಕಾರ್ಜುನ ಯಮನೂರಿ<br>ಕೃಷಿ ಕಾರ್ಮಿಕ<br>ಕೃಷಿ ಸಂಶೋಧನಾ ಕೇಂದ್ರ ಮಾಳನೂರು | 27,322=00 |
| | 10. | ಶ್ರೀ. ನಂಜುಂಡಯ್ಯ<br>ಹಿರಿಯ ಕ್ಷೇತ್ರ ಸಹಾಯಕ<br>ಕೃಷಿ ಸಂಶೋಧನಾ ಕೇಂದ್ರ ಧಡೇಸೂಗೂರು | 24,291=00 |
| | 11. | ಡಾ. ಲೋಕೇಶ ಕೆ,<br>ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು<br>ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ<br>ಕೃಷಿ ಮಹಾವಿದ್ಯಾಲಯ ಕಲಬುರಗಿ | 11,984=00 |
| | 12. | ಡಾ. ರಾಜಕುಮಾರ ಜೆ. ಕರ್ವೆ<br>ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು<br>ದೈಹಿಕ ಶಿಕ್ಷಣ ವಿಭಾಗ ಕೃಮವಿ., ಕಲಬುರಗಿ. | 28,302=00 |
| | 13. | ಡಾ॥ ಯೇಸಪ್ಪ ಎಲ್<br>ಸಹಾಯಕ ಪ್ರಾಧ್ಯಾಪಕರು (ಭೌತಶಾಸ್ತ್ರ)<br>ಕೃತಾಂ.ಮ.ರಾಯಚೂರು | 11,747=00 |
| | 14. | ಡಾ. ಸುರೇಶ ಎಸ್. ಪಾಟೀಲ್<br>ಡೀನ್ (ಕೃಷಿ)<br>ಕೃಷಿ ಮಹಾವಿದ್ಯಾಲಯ ಕಲಬುರಗಿ | 46,834=00 |

| | | |
|---|---|---|
| 15. | ಡಾ. ರಾಜ<br>ಸಹಾಯಕ ಪ್ರಾಧ್ಯಾಪಕರು (ಸಸ್ಯ ರೋಗಶಾಸ್ತ್ರ)<br>ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ | 70,000=00 |
| 16. | ಶ್ರೀ. ರಾಜು ದೇವಂದ್ರಪ್ಪ<br>ಹಿರಿಯ ಕ್ಷೇತ್ರ ಸಹಾಯಕ<br>ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ | 1,46,288=00 |
| 17. | ಡಾ. ಬಿ.ಎಸ್.ರಡ್ಡಿ<br>ಸಹ ಪ್ರಾಧ್ಯಾಪಕರು & ವಿಸ್ತರಣಾ ಮುಂದಾಳು,<br>ವ.ಕೃಸಂ.ಸಂಸ್ಥೆ,ಕಲಬುರಗಿ | 1,08,625=00 |
| 18. | ದಿ.ಶ್ರೀ.ಸಿ.ಯು. ಕೊಟಬಾಗಿ,<br>ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು<br>ಕುಲಸಚಿವರು ಕೃವಿ.ವಿ.,ರಾಯಚೂರು. | 4,43,206=00 |

ಮುಂದುವರೆದು, ವಿಶ್ವವಿದ್ಯಾಲಯದ ಸಿಬ್ಬಂದಿಗಳು ಆರೋಗ್ಯ ವಿಮೆ ಮಾಡಿಸುವಂತೆ ಪ್ರೋತ್ಸಾಹಿಸಲು ಸಭೆಯು ಸೂಚಿಸಿತು.

**(ಕ್ರಮ: ಕುಲಸಚಿವರು / ಆಡಳಿತಾಧಿಕಾರಿಗಳು)**

**ಐಟಂ–6** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ವ್ಯಾಸಂಗ ಮಾಡುವ ಸ್ನಾತಕ, ಸ್ನಾತಕೋತ್ತರ ಹಾಗೂ ಪಿ.ಹೆಚ್.ಡಿ. ವಿದ್ಯಾರ್ಥಿಗಳ ಮೆರಿಟ್ ಮತ್ತು ಪ್ರೋತ್ಸಾಹಕ ವಿದ್ಯಾರ್ಥಿ ವೇತನವನ್ನು ಹೆಚ್ಚಿಸುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕ, ಸ್ನಾತಕೋತ್ತರ ಹಾಗೂ ಪಿ.ಹೆಚ್.ಡಿ. ವಿದ್ಯಾರ್ಥಿಗಳ ಮೆರಿಟ್ ಹಾಗೂ ಪ್ರೋತ್ಸಾಹಕ ವಿದ್ಯಾರ್ಥಿ ವೇತನಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆಯನ್ನು ನೀಡಿತು :

**ರೂ. ಪ್ರತಿ ತಿಂಗಳಿಗೆ**

| | **ಪ್ರಸ್ತುತ** | | | **ಪರಿಷ್ಕರಿಸಿ ಹೆಚ್ಚಿಸಬಹುದಾದ** | | |
|---|---|---|---|---|---|---|
| **ವಿಷಯ** | **ಸ್ನಾತಕ ಪದವಿ** | **ಸ್ನಾತಕೋತ್ತರ ಪದವಿ** | **ಪಿ.ಹೆಚ್.ಡಿ. ಪದವಿ** | **ಸ್ನಾತಕ ಪದವಿ** | **ಸ್ನಾತಕೋತ್ತರ ಪದವಿ** | **ಪಿ.ಹೆಚ್.ಡಿ. ಪದವಿ** |
| ಮೆರಿಟ್ ವಿದ್ಯಾರ್ಥಿ ವೇತನ | ರೂ.500/– | ರೂ.1500/– | ರೂ.2000/– | ರೂ.1500/– | ರೂ.4000/– | ರೂ.6000/– |
| ಪ್ರೋತ್ಸಾಹಕ ವಿದ್ಯಾರ್ಥಿ ವೇತನ | — | ರೂ.1000/– | ರೂ.1500/– | — | ರೂ.2000/– | ರೂ.3000/– |

**(ಕ್ರಮ : ಕುಲಸಚಿವರು)**

**ಐಟಂ–7** **ಅರೆ ಕಾಲಿಕಾ ಆಧಾರದ ಮೇಲೆ ನೇಮಕವಾದ ಬೋಧಕರಿಗೆ ಮಾಸಿಕ ಗೌರವಧನ / ಸಂಭಾವನೆ ಹೆಚ್ಚಿಸುವ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ವಿವಿಧ ಮಹಾವಿದ್ಯಾಲಯಗಳಲ್ಲಿ ಕ್ರೆಡಿಟ್ ಲೋಡ್ ಪ್ರಕಾರ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಬೋಧನೆ ಮಾಡುತ್ತಿರುವ ಗುತ್ತಿಗೆ ಆಧಾರದ ಬೋಧಕರಿಗೆ ಮಾಸಿಕ ಗೌರವಧನ / ಸಂಭಾವನೆ ಈ ಕೆಳಕಂಡಂತೆ ಪರಿಷ್ಕರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆಯನ್ನು ನೀಡಿತು :

ರೂ. ಪ್ರತಿ ತಿಂಗಳಿಗೆ

| ಕ್ರಸಂ. | ಗುಣಾಂಕಗಳು /ಕ್ರೆಡಿಟ್ಸ್ | ಮಾಸಿಕ ಗೌರವಧನ / ಸಂಭಾವನೆ | | |
|---|---|---|---|---|
| | | ಸ್ನಾತಕ | | ಸ್ನಾತಕೊತ್ತರ |
| | | ಪ್ರಸ್ತುತ (ರೂ.) | ಪ್ರಸ್ತಾವನೆ (ರೂ.) | ಪ್ರಸ್ತಾವನೆ (ರೂ.) |
| 1 | ಒಂದು ಗುಣಾಂಕ | ರೂ.6000/– | ರೂ.8000/– | ರೂ.10000/– |
| 2 | ಎರಡು ಗುಣಾಂಕಗಳು | ರೂ.8000/– | ರೂ.10000/– | ರೂ.12000/– |
| 3 | ಮೂರು ಗುಣಾಂಕಗಳು | ರೂ.10000/– | ರೂ.12000/– | ರೂ.14000/– |

(ಕ್ರಮ : ಕುಲಸಚಿವರು)

**ಐಟಂ–8** **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.**

**ಠರಾವು:**

ರೂ. 10.00 ಲಕ್ಷ ಅಧಿಕದ ಈ ಕೆಳಕಂಡ ಹೊಸ ಸಿವಿಲ್ ಕಾಮಾಗಾರಿಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯ ಹಿನ್ನೆಲೆಯಲ್ಲಿ ಕೃವಿವಿ., ರಾಯಚೂರಿನ ಮುಖ್ಯ ಆವರಣ ಮತ್ತು ಅಧೀನದ ಆವರಣದಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| ಕ್ರಮ. ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ.) ಲಕ್ಷಗಳಲ್ಲಿ | ಅನುದಾನ ವಿವರ |
|---|---|---|---|
| **I** | **ಕೃವಿ.ವಿ.ವಿ. ರಾಯಚೂರು.** | | |
| 1 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೇಷ್ಮೆ ಹುಳು ಸಾಕಾಣಿಕೆ ಘಟಕ ಮತ್ತು ಕೃಷಿ ಹೊಂಡ ನಿರ್ಮಿಸುವ ಕೆಲಸ. | 59.61 | ಆರ್.ಕೆ.ವಿ.ವಾಯ್ ಅನುದಾನ 55.55 ಲಕ್ಷ + ಕೃವಿವಿ ಅನುದಾನ |
| 2 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ Fish Wet Lab ಹಾಗೂ ಸಣ್ಣ ಮೀನು ಮರಿಗಳನ್ನು ಮತ್ತು ದೊಡ್ಡ ಮೀನುಗಳನ್ನು ಬೆಳೆಸಲು, ಕಾಪಾಡಲು ಹಾಗೂ ಮೀನುಗಾರಿಕಾ ಚಟುವಟಿಕೆಗಳನ್ನು ಬಲಪಡಿಸಲು ಮೀನು ಹೊಂಡಗಳಿಗೆ ಬೇಲಿ ಹಾಕುವ ಕೆಲಸ. | 50.90 | ಆರ್.ಕೆ.ವಿ.ವಾಯ್ ಅನುದಾನ 48.60 ಲಕ್ಷ + ಕೃವಿವಿ ಅನುದಾನ |
| 3 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ Seed Womb ಯೋಜನೆಯಡಿಯಲ್ಲಿ ಶೆಡ್ ನಿರ್ಮಿಸುವ ಕೆಲಸ. | 35.12 | ಕೆ.ಕೆ.ಆರ್.ಡಿ.ಬಿ. ಅನುದಾನ 32.00 ಲಕ್ಷ + ಕೃವಿವಿ ಅನುದಾನ |
| 4 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ವಿ.ವಿ.ಐ.ಪಿ. ಅಥಿತಿ ಗೃಹದ ಒಳಾಂಗಣ ಅಲಂಕಾರಿಕಾ ಕೆಲಸ. | 19.85 | ಕೃ.ವಿ.ವಿ.ವಿ. ಅನುದಾನ |
| 5 | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರಿನ ಎಫ್.ಎಮ್.ಪಿ.ಇ ವಿಭಾಗಕ್ಕೆ ಕೃಷಿ ಯಂತ್ರೋಪಕರಣಗಳ ಶೆಡ್ಡನ್ನು ನಿರ್ಮಿಸುವ ಕೆಲಸ. | 40.00 | ಆರ್.ಕೆ.ವಿ.ವಾಯ್ ಅನುದಾನ |
| **II** | **ಕೃಷಿ ವಿಜ್ಞಾನ ಕೇಂದ್ರ, ಹಗರಿ.** | | |
| 6 | ಕೃಷಿ ವಿಜ್ಞಾನ ಕೇಂದ್ರ ಹಗರಿಯಲ್ಲಿ ರೈತರ ತರಬೇತಿ ನಿಲಯ ನಿರ್ಮಿಸುವ ಕೆಲಸ. | 105.00 | ಕೆ.ವಿ.ಕೆ ಅನುದಾನ 80.00 ಲಕ್ಷ+ ಕೃ.ವಿ.ವಿ. ಅನುದಾನ |

| | | | |
|---|---|---|---|
| 7 | ಕೃಷಿ ವಿಜ್ಞಾನ ಕೇಂದ್ರ ಹಗರಿಯಲ್ಲಿ ರೇಷ್ಮೆ ಹುಳು ಸಾಕಾಣಿಕೆ ಘಟಕ ಮತ್ತು ಕೃಷಿ ಹೊಂಡ ನಿರ್ಮಿಸುವ ಕೆಲಸ. | 59.60 | ಆರ್.ಕೆ.ವಿ.ವಾಯ್ ಅನುದಾನ 55.55 ಲಕ್ಷ + ಕೃವಿವಿವಿ ಅನುದಾನ |
| **III** | **ಕೃಷಿ ವಿಜ್ಞಾನ ಕೇಂದ್ರ ರದ್ದೇವಾಡಗಿ.** | | |
| 8 | ಕೃಷಿ ವಿಜ್ಞಾನ ಕೇಂದ್ರ ರದ್ದೇವಾಡಗಿಯಲ್ಲಿ ರೈತರ ತರಬೇತಿ ನಿಲಯ ನಿರ್ಮಿಸುವ ಕೆಲಸ. | 105.00 | ಕೆ.ವಿ.ಕೆ ಅನುದಾನ 80.00 ಲಕ್ಷ+ ಕೃವಿ.ವಿ. ಅನುದಾನ |
| 9 | ಕೃಷಿ ವಿಜ್ಞಾನ ಕೇಂದ್ರ ರದ್ದೇವಾಡಗಿಯಲ್ಲಿ ಸಾವಯವ ಗೊಬ್ಬರ ತಯಾರಿಕೆ ಘಟಕ ಹಾಗೂ ಆಹಾರ ಸಂಸ್ಕರಣೆ ವಿಭಾಗದಲ್ಲಿ ಕಾಂಕ್ರೀಟ್ ನೆಲವನ್ನು ನಿರ್ಮಿಸುವ ಕೆಲಸ. | 13.88 | ಕೆ.ವಿ.ಕೆ. ಅನುದಾನ |
| **IV** | **ಕೃಷಿ ವಿಜ್ಞಾನ ಕೇಂದ್ರ ಕವಡಿಮಟ್ಟಿ** | | |
| 10 | ಕೃಷಿ ವಿಜ್ಞಾನ ಕೇಂದ್ರ ಕವಡಿಮಟ್ಟಿಯಲ್ಲಿ ಕುರಿ ಸಾಕಾಣಿಕಾ ಶೆಡ್ಡನ್ನು ನಿರ್ಮಿಸುವ ಕೆಲಸ. | 20.00 | ಐ.ಸಿ.ಎ.ಆರ್. ಅನುದಾನ |
| **V** | **ಕೃಷಿ ಸಂಶೋಧನಾ ಕೇಂದ್ರ ದಢೇಸಗೂರ.** | | |
| 11 | ಕೃಷಿ ಸಂಶೋಧನಾ ಕೇಂದ್ರ ದಢೇಸಗೂರಿನಲ್ಲಿ Fish Wet Lab ನಿರ್ಮಿಸುವ ಕೆಲಸ. | 24.00 | ಆರ್.ಕೆ.ವಿ.ವಾಯ್ ಅನುದಾನ 24.00 ಲಕ್ಷ |
| **VI** | **ಕೃಷಿ ಮಹಾವಿದ್ಯಾಲಯ ಗಂಗಾವತಿ.** | | |
| 12 | ಕೃಷಿ ಮಹಾವಿದ್ಯಾಲಯ ಗಂಗಾವತಿಯಲ್ಲಿ ವಿದ್ಯಾರ್ಥಿಗಳ ವಸತಿ ನಿಲಯ (ನೆಲ ಮಹಡಿ) ನಿರ್ಮಿಸುವ ಕೆಲಸ. | 344.45 | ಕೃವಿ.ವಿ.ವಿ. ಅನುದಾನ |
| 13 | ಕೃಷಿ ಮಹಾವಿದ್ಯಾಲಯ ಗಂಗಾವತಿಯಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯ (ಅರ್ಧ ಭಾಗ) ನಿರ್ಮಿಸುವ ಕೆಲಸ. | 498.50 | ಕೃವಿ.ವಿ.ವಿ. ಅನುದಾನ |
| 14 | ಕೃಷಿ ಸಂಶೋಧನಾ ಕೇಂದ್ರ ಗಂಗಾವತಿಯಲ್ಲಿ ರೇಷ್ಮೆ ಹುಳು ಸಾಕಾಣಿಕೆ ಘಟಕ ಮತ್ತು ಕೃಷಿ ಹೊಂಡ ನಿರ್ಮಿಸುವ ಕೆಲಸ. | 59.60 | ಆರ್.ಕೆ.ವಿ.ವಾಯ್ ಅನುದಾನ 55.55 ಲಕ್ಷ + ಕೃವಿವಿವಿ ಅನುದಾನ |
| **VII** | **ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ.** | | |
| 15 | ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಯಲ್ಲಿ ವಸತಿಗೃಹದ ಪ್ರಯೋಗಾಲಯದ ತಾಕುಗಳಿಗೆ ತಂತಿಬೇಲಿ (ವಿಸ್ತರಿಸುವ) ಕೆಲಸ. | 30.40 | ಕೃವಿ.ವಿ.ವಿ. ಅನುದಾನ |
| 16 | ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಯಲ್ಲಿ ರೇಷ್ಮೆ ಹುಳು ಸಾಕಾಣಿಕೆ ಘಟಕ ಮತ್ತು ಕೃಷಿ ಹೊಂಡ ನಿರ್ಮಿಸುವ ಕೆಲಸ. | 57.83 | ಆರ್.ಕೆ.ವಿ.ವಾಯ್ ಅನುದಾನ 55.55 ಲಕ್ಷ + ಕೃವಿವಿವಿ ಅನುದಾನ |
| **VIII** | **ಕೃಷಿ ಮಹಾವಿದ್ಯಾಲಯ, ಕಲಬುರಗಿ.** | | |
| 17 | ಕೃಷಿ ಮಹಾವಿದ್ಯಾಲಯ ಕಲಬುರ್ಗಿ ಹೊಸ ಆವರಣದ ಜಫರಾಬಾದ ಪ್ಲಾಟಿನ ಕಂಪೌಂಡ ಗೋಡೆಯನ್ನು (ವಿಸ್ತರಿಸುವ) ನಿರ್ಮಿಸುವ ಕೆಲಸ. | 55.21 | ಕೃವಿ.ವಿ.ವಿ. ಅನುದಾನ |
| 18 | ಕೃಷಿ ಮಹಾವಿದ್ಯಾಲಯ ಕಲಬುರ್ಗಿಯಲ್ಲಿ ರೇಷ್ಮೆ ಹುಳು ಸಾಕಾಣಿಕೆ ಘಟಕ ಮತ್ತು ಕೃಷಿ ಹೊಂಡ ನಿರ್ಮಿಸುವ ಕೆಲಸ. | 57.90 | ಆರ್.ಕೆ.ವಿ.ವಾಯ್ ಅನುದಾನ 55.55 ಲಕ್ಷ + ಕೃವಿವಿವಿ ಅನುದಾನ |

**(ಕ್ರಮ : ಆಸ್ತಿ ಅಧಿಕಾರಿ)**

**ಐಟಂ–9**

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಕಟ್ಟಡಗಳ ಛಾವಣಿಗಳ ಮೇಲೆ ಸೌರಶಕ್ತಿ ಉತ್ಪಾದನಾ ಘಟಕವನ್ನು ಅಳವಡಿಸಿಕೊಳ್ಳಲು ಅನುಮೋದನೆ ನೀಡುವ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಕಟ್ಟಡಗಳ ಛಾವಣಿಗಳ ಮೇಲೆ ಸೌರಶಕ್ತಿ ಉತ್ಪಾದನಾ ಘಟಕವನ್ನು ಅಳವಡಿಸುವ ಪ್ರಸ್ತಾವನೆಯನ್ನು ತಾತ್ಕಾಲಿಕವಾಗಿ ಮುಂದೂಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.

**(ಕ್ರಮ : ಆಸ್ತಿ ಅಧಿಕಾರಿ)**

**ಐಟಂ–10**

**ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರಯೋಗಾಲಯದ ಪ್ರತಿ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| Sl. No. | Name of the Equipment | Name of the Department/ Project | Qty | Approximate Cost in (Rs. Lakhs) | Ab. A/c. No. |
|---|---|---|---|---|---|
| 1. | Packing equipments / machinery for millets and value added products | Dept. of Processing and Food Engineering, CAE, Raichur. | As per specification | 12.00 | 6795/701 |
| 2. | Atomic Absorption Spectrophotometer | Extension Leader, AEEC, Hadagali. | 01 | 19.00 | 7517/701 |
| 3. | Silkworm Rearing appliances equipments | Professor of Sericulture, AC, Raichur. | 05 Sets | 11.25 | 6766/701 |
| 4. | Real Time PCR (q-PCR) | Rice Pathology lab at AICRP-Rice, ARS, Gangavathi. | 01 | 16.00 | 7218/701 |
| 5. | LC-MS/MS | Food Testing Laboratory, Dept. of PRFQA Lab, UAS, Raichur. | 01 Unit | 150.00 | 7209/701 |
| 6. | 2 tons capacity seed processing plant | Seed Unit, UAS, Raichur. | As per specification | 112.82 | Under RF Ab a/c: 8637/701for RS: 92.83 Lakhs & Under project Ab a/c: 5045/701 for RS: 20.00 Lakhs |
| 7. | Chilli processing and value addition line | Dept. of Processing and Food Engineering, CAE, Raichur. | 01 Unit | 52.00 | 7208/701 |

| | | | | | |
|---|---|---|---|---|---|
| 8. | Groundnut primary processing and oil extraction units | Dept. of Processing and Food Engineering, CAE, Raichur. | 01 Unit | 30.00 | 7208/701 |
| 9. | Groundnut chikki production Line | Dept. of Processing and Food Engineering, CAE, Raichur. | 01 Unit | 15.00 | 7208/701 |
| 10. | Peanut butter production and packing line | Dept. of Processing and Food Engineering, CAE, Raichur. | 01 Unit | 15.00 | 7208/701 |
| 11. | Ginger processing value addition and oil extraction line | Dept. of Processing and Food Engineering, CAE, Raichur. | 01 Unit | 70.00 | 7208/701 |
| 12. | Instruments for food testing laboratory | Dept. of Processing and Food Engineering, CAE, Raichur. | 01 Unit | 25.00 | 7208/701 |
| 13. | Differential Scanning Calorimetry | Food Microbiology Laboratory, PRFQAL, UAS, Raichur. | 01 | 35.00 | 7553/701 |
| 14. | Moulds Required for seed womb production | Principal Investigator, Afforestation Establishment of Seed Womb Technology Project | 01 | 20.00 | 7606/701 |
| 15. | Injection moulding machine for seed womb production | Principal Investigator, Afforestation Establishment of Seed Womb Technology Project | 01 | 75.00 | 7606/701 |

(ಕ್ರಮ : ಸರಕು ಖರೀದಿ ಅಧಿಕಾರಿ)

**ಐಟಂ–11** **ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪೀಠೋಪಕರಣಗಳನ್ನು ಖರೀದಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರತಿ ಪೀಠೋಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| Sl.No. | Name of the Furniture | Qty | Approximate Unit Cost | Approximate Amount | Grants under proposed |
|---|---|---|---|---|---|
| 1 | Chair | 353 | 2,500.00 | 8,82,500.00 | 75% under UAS Grants & 25% under SCSP & |
| 2 | Study Tables | 491 | 4,500.00 | 22,09,500.00 | |

| | | | | | | |
|---|---|---|---|---|---|---|
| | 3 | Steel Cots | 489 | 12,000.00 | 58,68,000.00 | TSP grants. |
| | 4 | Dining Tables | 23 | 50,000.00 | 11,50,000.00 | |
| | (ಕ್ರಮ : ಸರಕು ಖರೀದಿ ಅಧಿಕಾರಿ) | | | | | |

| | |
|---|---|
| ಐಟಂ–12 | **ವಿಶ್ವವಿದ್ಯಾಲಯದ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗಾಗಿ ವಾಹನಗಳ ಖರೀದಿಗೆ ಅನುಮೋದನೆ ನೀಡುವುದು.**<br><br>**ಠರಾವು:**<br>ಚರ್ಚೆಯ ನಂತರ, ವಿಶ್ವವಿದ್ಯಾಲಯದ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗಾಗಿ 07 ಲಘು ವಾಹನಗಳನ್ನು ಜೆಮ್ ಜಾಲತಾಣದಲ್ಲಿ ನಿಯಮಾವಳಿಗಳ ಪ್ರಕಾರ ಖರೀದಿಸುವ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಸರಕು ಖರೀದಿ ಅಧಿಕಾರಿ)** |
| ಐಟಂ–13 | **ಸಿ.ಎ.ಎಸ್. 2006 ಯೋಜನೆಯಡಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ / ವಿಜ್ಞಾನಿಗಳ ಪದೋನ್ನತಿಯ ಕುರಿತು ಅನುಮೋದನೆ ನೀಡುವುದು.**<br><br>**ಠರಾವು:**<br>ಚರ್ಚೆಯ ನಂತರ, ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000 ರಿಂದ ಎ.ಜಿ.ಪಿ. ರೂ. 7000 ಕ್ಕೆ (2 ಶಿಕ್ಷಕರುಗಳಿಗೆ), ಎ.ಜಿ.ಪಿ. ರೂ. 7000 ರಿಂದ ಎ.ಜಿ.ಪಿ. ರೂ. 8000 ಕ್ಕೆ (58 ಶಿಕ್ಷಕರಿಗೆ), ಎ.ಜಿ.ಪಿ. ರೂ. 8000 ರಿಂದ ಎ.ಜಿ.ಪಿ. ರೂ. 9000 ಕ್ಕೆ (14 ಶಿಕ್ಷಕರಿಗೆ) ಹಾಗೂ ಎ.ಜಿ.ಪಿ. ರೂ. 9000 ರಿಂದ ಎ.ಜಿ.ಪಿ. ರೂ. 10000 ಕ್ಕೆ (09 ಶಿಕ್ಷಕರಿಗೆ) ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರುಗಳಿಗೆ ಸಿ.ಎ.ಎಸ್.–2006 ನಿಯಮಾವಳಿಗಳ ಪ್ರಕಾರ ಅರ್ಹತೆ ಹೊಂದಿದ ದಿನಾಂಕದಿಂದ ಅನ್ವಯವಾಗುವಂತೆ ಮುಂಬಡ್ತಿ ಆದೇಶಗಳನ್ನು ನಡವಳಿಗಳ ಸ್ಥಿರೀಕರಣಕ್ಕೆ ನಿರೀಕ್ಷಿಸದೇ ಹೊರಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |
| ಐಟಂ–14 | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಹೆಚ್.ಡಿ.ಎಫ್.ಸಿ. ಬ್ಯಾಂಕ್‌ನ ಸ್ಮಾರ್ಟ್ ಬ್ಯಾಂಕಿಂಗ್ ಲಾಬಿ ಕೇಂದ್ರವನ್ನು ಸ್ಥಾಪಿಸುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ "ಸ್ಮಾರ್ಟ್ ಬ್ಯಾಂಕಿಂಗ್ ಲಾಭಿ" ಸ್ಥಾಪಿಸಲು 250 ಚದರ ಅಡಿಯ ಜಾಗವನ್ನು ನೀಡುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆಯನ್ನು ನೀಡಲಿಲ್ಲ.<br>**(ಕ್ರಮ: ಕುಲಸಚಿವರು)** |
| ಐಟಂ–15 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹನ್ನೆರಡನೇ ಘಟಿಕೋತ್ಸವಕ್ಕೆ ಅತಿಥಿಗಳ ಯಾದಿಯನ್ನು ಅಂತಿಮಗೊಳಿಸುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಸಭೆಯು ಸರ್ವಾನುಮತದಿಂದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಹನ್ನೆರಡನೇ ಘಟಿಕೋತ್ಸವದ ಸಂದರ್ಭದಲ್ಲಿ ಅತಿಥಿಗಳಾಗಿ ಆಹ್ವಾನಿಸಲು ಪ್ರಸ್ತಾಪಿಸಿದ ಗಣ್ಯರ ಯಾದಿಯಂತೆ ಕ್ರಮಾನುಗತವಾಗಿ ಈ ಕೆಳಕಂಡ ಗಣ್ಯರ ವ್ಯಕ್ತಿ ಪರಿಚಯದೊಂದಿಗೆ ಗೌರವಾನ್ವಿತ ಕುಲಾಧಿಪತಿಗಳಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಠರಾಯಿಸಿತು:<br><br>1 — ಶ್ರೀ ವೆಂಕಯ್ಯ ನಾಯ್ಡು, ಮಾನ್ಯ ಭಾರತದ ಉಪ–ರಾಷ್ಟ್ರಪತಿಗಳು, ನವದೆಹಲಿ<br>2 — ಡಾ. ಕೆ.ಎನ್.ವ್ಯಾಸ್, ಭಾಭಾ ಅಟೋಮಿಕ್ ರಿಸರ್ಚ್ ಸೆಂಟರ್, ಟ್ರಾಂಬೆ, ಮುಂಬಯಿ |

| | | | |
|---|---|---|---|
| | | 3 | ಡಾ. ಸುಧಾ ನಾರಾಯಣಮೂರ್ತಿ, ನಾರಾಯಣಮೂರ್ತಿ ಫೌಂಡೇಶನ್, ಇನ್‌ಫೋಸಿಸ್, ಬೆಂಗಳೂರು |
| | | 4 | ಡಾ. ತ್ರಿಲೋಚನಾ ಮೊಹಾಪಾತ್ರ, ಕಾರ್ಯದರ್ಶಿ(ಡಿ.ಎ.ಆರ್.ಇ.) ಮತ್ತು ಡೈರೆಕ್ಟರ್ ಜನರಲ್, ಐ.ಸಿ.ಎ.ಆರ್., ನವದೆಹಲಿ |
| | | 5 | ಜಸ್ಟೀಸ್ ಶಿವರಾಜ್ ವಿರುಪಣ್ಣ ಪಾಟೀಲ್, ನಿವೃತ್ತಿ ನ್ಯಾಯಾಧೀಶರು, ಸರ್ವೋಚ್ಛ ನ್ಯಾಯಾಲಯ, ನವದೆಹಲಿ. |
| | | 6 | ಡಾ. ಬಿ.ಎಸ್. ಪಾಟೀಲ್, ಡೈರೆಕ್ಟರ್, ಫ್ರೂಟ್ಸ್ & ವೆಜಿಟೇಬಲ್ ಇಂಪ್ರೋವ್‌ಮೆಂಟ್ ಸೆಂಟರ್, ಟೆಕ್ಸಾಸ್, ಯು.ಎಸ್.ಎ. |
| | | 7 | ಡಾ. ಎಸ್.ಎನ್. ಝಾ, ಉಪ–ಮಹಾನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ |
| | (ಕ್ರಮ : ಕುಲಸಚಿವರು) | | |
| ಐಟಂ–16 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2020–21ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಿಗೆ ಅನುಮೋದನೆ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2020–21 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** | | |
| ಐಟಂ–17 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2012–13 ಮತ್ತು 2013–14 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಯನ್ನು ಅಡಾಕ್ ಸಮಿತಿಗೆ ಸಲ್ಲಿಸಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2012–13 ಮತ್ತು 2013–14 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಯನ್ನು ಅಡಾಕ್ ಸಮಿತಿಗೆ ಸಲ್ಲಿಸಲು ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** | | |
| ಐಟಂ–18 | **ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಡಿಯಲ್ಲಿ (HRMS) ದಾಖಲಾಗದಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ನೌಕರರಿಗೆ 2022–23 ನೇ ಸಾಲಿನ ಆರ್ಥಿಕ ವರ್ಷದಲ್ಲಿ ವೇತನವನ್ನು ಬಟವಾಡೆ ಮಾಡಲು ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಹಾಗೂ ಎ.ಐ.ಸಿ.ಆರ್.ಪಿ. ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಡಿಯಲ್ಲಿ (HRMS) ದಾಖಲಾಗದಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ನೌಕರರಿಗೆ 2022–23 ನೇ ಸಾಲಿನ ಆರ್ಥಿಕ ವರ್ಷದಲ್ಲಿ ವೇತನವನ್ನು ಬಟವಾಡೆ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು.<br><br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** | | |
| ಐಟಂ–19 | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅರ್ಹ ಮಹಿಳಾ ಸಿಬ್ಬಂದಿಗಳಿಗೆ ಶಿಶುಪಾಲನಾ ರಜೆಯನ್ನು ಮಂಜೂರು ಮಾಡುವ ಕುರಿತು.** | | |

| | |
|---|---|
| | **ಠರಾವು:**<br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಮಹಿಳಾ ಸಿಬ್ಬಂದಿಗಳಿಗೆ ಸೇವಾವಧಿಯಲ್ಲಿ ಗರಿಷ್ಟ ಆರು ತಿಂಗಳವರೆಗೆ ಅಂದರೆ 180 ದಿನಗಳ "ಶಿಶುಪಾಲನಾ ರಜೆ"ಯನ್ನು ಸರ್ಕಾರಿ ಆದೇಶ ಸಂಖ್ಯೆ : ಆಇ 4 (ಇ) ಸೇನಿಸೇ 2021 ದಿನಾಂಕ 21-06-2021 ರಂದು ಆದೇಶದಲ್ಲಿ ತಿಳಿಸಿರುವ ಷರತ್ತುಗಳೊಂದಿಗೆ ಮಂಜೂರು ಮಾಡಲು ಘನ ವೇದಿಕೆಯ ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |
| ಐಟಂ-20 | **ಡಾ. ಎಸ್. ವಿ. ಪಾಟೀಲ ಜನ್ಮ ಶತಮಾನೋತ್ಸವ ಸಮಾರಂಭ ಆಯೋಜನೆಗಾಗಿ ವಿಶ್ವವಿದ್ಯಾಲಯದ ವತಿಯಿಂದ ರೂ. 10.00 ಲಕ್ಷಗಳ ಕೊಡುಗೆಯನ್ನು ಕೃವಿವಿ., ಧಾರವಾಡಕ್ಕೆ ನೀಡುವ ಕುರಿತು.**<br>**ಠರಾವು:**<br>ಸುದೀರ್ಘ ಚರ್ಚೆಯ ನಂತರ, ಕೃವಿವಿ, ಧಾರವಾಡದಲ್ಲಿ ಡಾ: ಎಸ್. ವಿ. ಪಾಟೀಲ ಜನ್ಮ ಶತಮಾನೋತ್ಸವ ಸಮಾರಂಭಗಳ ಯಶಸ್ವಿ ಆಯೋಜನೆಗಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ನಿಧಿಯಿಂದ ರೂ. 10.00 ಲಕ್ಷಗಳ ಕೊಡುಗೆಯನ್ನು ನೀಡಲು ಪ್ರಸ್ತಾವನೆಯನ್ನು ಗೌರವಾನ್ವಿತ ಕುಲಪತಿಗಳ ಹಂತದಲ್ಲಿ ಪರಿಗಣಿಸಿ, ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಸಂಶೋಧನಾ ನಿರ್ದೇಶಕರು)** |
| ಐಟಂ-21 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ 'ಸಮುದಾಯ ಬಾನುಲಿ ಕೇಂದ್ರ' ಸ್ಥಾಪನೆಗೆ ಅನುದಾನ ಒದಗಿಸುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ವಿಶ್ವವಿದ್ಯಾಲಯದ ವತಿಯಿಂದ ಕಲ್ಯಾಣ-ಕರ್ನಾಟಕ ಭಾಗದ ರೈತ ಬಾಂಧವರಿಗೆ ಹಾಗೂ ಕೃಷಿ ಉದ್ಯಮಿಗಳಿಗೆ ಅಗತ್ಯವಿರುವ ಮಾಹಿತಿಯನ್ನು ಸಮುದಾಯ ಬಾನುಲಿ ಕೇಂದ್ರದ ಮೂಲಕವೂ ನೀಡಲು ಅನುವಾಗುವಂತೆ **'ಸಮುದಾಯ ಬಾನುಲಿ ಕೇಂದ್ರ'ವನ್ನು** ಪ್ರಾರಂಭಿಸಲು ಪ್ರಸ್ತುತ **ರೂ.45.00 ಲಕ್ಷಗಳ ಅನುದಾನವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು** ಗೌರವಾನ್ವಿತ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ನೀಡಿತು.<br>**(ವಿಸ್ತರಣಾ ನಿರ್ದೇಶಕರು / ಹಣಕಾಸು ನಿಯಂತ್ರಣಾಧಿಕಾರಿಗಳು)** |
| ಐಟಂ-22 | **ನ್ಯಾಯಾಲಯದ ತೀರ್ಪಿನನ್ವಯ ಎಂ.ಎಸ್ಸಿ ಪದವಿ ಹೊಂದಿದ ಅರ್ಹ ಶಿಕ್ಷಕರುಗಳಿಗೆ ಎರಡು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ರಿಟ್ ಅರ್ಜಿ ಸಂ. 201448/2021 ರ (ಡಾ॥ ಅಜೀತ್‌ಕುಮಾರ ಕೆ. ಮತ್ತು 87 ಇತರರು ವಿರುದ್ಧ ಸರ್ಕಾರ ಮತ್ತು ಇತರರು) ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಗೌರವಾನ್ವಿತ ಮಾನ್ಯ ವ್ಯವಸ್ಥಾಪನಾ ಮಂಡಳಿ ಪರಿಶೀಲಿಸಿ, ಕೃಷಿ ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ಮುಂದಿನ ಕ್ರಮಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br>**(ಕ್ರಮ : ಕುಲಸಚಿವರು)** |
| ಐಟಂ-23 | **ಶ್ರೀ ವಿನಯ ಬಿ. ಪಾಟೀಲ್ ಇವರಿಗೆ ಬಿ.ಎಸ್.ಸಿ (ಕೃಷಿ) ಪದವಿ ಸಂಬಂಧ ರಿಟ್ ಅರ್ಜಿ ಸಂ. 55601/2018 ರಲ್ಲಿ (ಟಿ. ಮಾರೆಪ್ಪ ವಿರುದ್ಧ ಸರಕಾರ ಮತ್ತು ಇತರರು) ಮಾನ್ಯ ಉಚ್ಚ ನ್ಯಾಯಾಲಯದ ನೀಡಿದ ತೀರ್ಪನನ್ವಯ ಕ್ರಮ ಕೈಗೊಳ್ಳಲು ಸಲ್ಲಿಸಿರುವ ಪ್ರಸ್ತಾವನೆಗೆ ಅನುಮೋದನೆ ಕುರಿತು.** |

**ಠರಾವು:**

ಡಾ. ವಿನಯ ಬಿ. ಪಾಟೀಲ್ ಇವರ ಬಿ.ಎಸ್.ಸಿ (ಕೃಷಿ) ಪದವಿ ಸಂಬಂಧ ರಿಟ್ ಅರ್ಜಿ ಸಂ. 5560/2016 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪು, ಸರ್ಕಾರದ ನಿರ್ದೇಶನದ ಪತ್ರಗಳು ಹಾಗೂ ಡಾ. ಎಸ್.ಕೆ. ಮೇಟಿ ಸಮಿತಿಯ ವರದಿಯನ್ನು ಪರಿಶೀಲಿಸಿ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ಬಂದ ಪತ್ರಗಳು / ಆದೇಶಗಳು / ವರದಿಗಳು ಮುಖ್ಯವಾಗಿ ಲಿಂಗಸೂಗೂರು ತಹಸಿಲ್ದಾರರು ಮತ್ತು ರಾಯಚೂರು ಜಿಲ್ಲಾಧಿಕಾರಿಗಳು ಕೃಷಿ ಆದಾಯದ ಪತ್ರದ ಬಗ್ಗೆ ನೀಡಿದ ಹಿಂಬರಹ, ಪೋಲಿಸ್ 'ಬಿ' ರಿಪೋರ್ಟ ಮತ್ತು ಇದಕ್ಕೆ ಸಂಬಂಧಿಸಿದಂತೆ ರಾಯಚೂರು ಜಿಲ್ಲಾ ನ್ಯಾಯಾಧೀಶರ ಆದೇಶ, ಹೈದ್ರಾಬಾದ್‌ನ ವಿಧಿ–ವಿಜ್ಞಾನ ಪ್ರಯೋಗಾಲಯ ರಿಪೋರ್ಟ ಮತ್ತು ಅತೀ ಮುಖ್ಯವಾಗಿ ಡಾ. ಎಸ್. ಬಿ. ದಂಡಿನ್ ಉನ್ನತ ಸಮಿತಿಯ ವರದಿಯನ್ನು ಗಮನಿಸಿ, ಅಲ್ಲದೇ ಧಾರವಾಡ ಕೃವಿವಿ ಕುಲಸಚಿವರು ದಿನಾಂಕ 26–09–2019 ರಂದು ಬರೆದ ಪತ್ರದ ವಿಷಯವನ್ನು ಕೂಡಾ ವಿವರವಾಗಿ ಚರ್ಚಿಸಿ, ಸದರಿ ಪ್ರಕರಣವನ್ನು ಇಲ್ಲಿಗೆ ಮುಕ್ತಾಯಗೊಳಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾದ (1) ಶ್ರೀ ತ್ರಿವಿಕ್ರಮ ಜೋಶಿ (2) ಶ್ರೀ ಕೊಟ್ರೇಶಪ್ಪ ಬಿ. ಕೋರಿ (3) ಶ್ರೀ ಸುನೀಲ್ ವರ್ಮಾ (4) ಶ್ರೀ ಶ್ರೀಧರ ಕೆಸರಹಟ್ಟಿ (5) ಶ್ರೀ ಮಹಾಚಿತೇಶ ಪಾಟೀಲ್ (6) ಡಾ. ಎಸ್. ಎಸ್. ಪಾಟೀಲ್ ಇವರುಗಳು ಬಹುಮತದಿಂದ ನಿರ್ಣಯಿಸಿದರು.

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಪ್ರತಿಕ್ರಿಯಿಸುತ್ತಾ, ಮಾನ್ಯ ಸದಸ್ಯರುಗಳು ಅಭಿಪ್ರಾಯಕ್ಕೆ ಸಹಮತಿಸಿದರೂ ಸಹ, ಈ ಪ್ರಕರಣವು 2008–09 ರಲ್ಲಿ ನಡೆದಿರುವುದರಿಂದ ಹಾಗೂ ಸರ್ಕಾರದ ಪತ್ರ ಸಂಖ್ಯೆ: ಕೃಇ. 19 ಕೃವಿರಾ 2019 ದಿನಾಂಕ 19–03–2021 ರ ಅಂತಿಮ ಪ್ಯಾರಾದಲ್ಲಿಯ ನಿರ್ದೇಶನದಂತೆ ಡಾ. ಎಸ್.ಬಿ. ದಂಡಿನ್ ಸಮಿತಿಯು ನೀಡಿರುವ ವರದಿಯನ್ನು ಆಧರಿಸಿ ಸರ್ಕಾರದ ಹಂತದಲ್ಲಿಯೇ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ ಎಂಬ ಅಭಿಪ್ರಾಯ ತಿಳಿಸಿದರು.

**(ಕ್ರಮ : ಕುಲಸಚಿವರು)**

## ಹೆಚ್ಚುವರಿ ಕಾರ್ಯಸೂಚಿಯ ವಿಷಯಗಳು

**ಹೆಚ್ಚುವರಿ ಕಾರ್ಯಸೂಚಿ ಐಟಂ–1**

**ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, **ಕೃವಿವಿ., ರಾಯಚೂರಿನ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣಲಕ್ಷಣ ಪ್ರಯೋಗಾಲಯವನ್ನು ಬಲಪಡಿಸುವ** ಸಲುವಾಗಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರಯೋಗಾಲಯದ ಪ್ರತಿ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| Sl. No. | Name of the Equipment | Name of the Department/ Project | Qty | Approximate Cost in (Rs. Lakhs) | Funding Agency with allotted Ab. A/c. No. |
|---|---|---|---|---|---|
| 1. | Preparative cum Flash Chromatography System | Department of PRFQA Laboratory, UAS, Raichur. | 01 | 44.00 | 6776/701 (RKVY Project) |
| 2. | GC-FID System | Department of PRFQA Laboratory, UAS, Raichur. | 01 | 28.00 | 6776/701 (RKVY Project) |

**(ಕ್ರಮ : ಸರಕು ಖರೀದಿ ಅಧಿಕಾರಿ)**

**ಹೆಚ್ಚುವರಿ ಕಾರ್ಯಸೂಚಿ ಐಟಂ–2**

**ಎಸ್.ಎ.ಯು ಅನುದಾನದಡಿ ಕೃಷಿ ಮಹಾವಿದ್ಯಾಲಯಗಳ ತರಗತಿಗಳ ನವೀಕರಣಕ್ಕಾಗಿ ಖರೀದಿಸಿದ ಉಪಕರಣದ ಮೊತ್ತವು ಅಂದಾಜು ಮೊತ್ತಕ್ಕಿಂತ ಹೆಚ್ಚಾಗಿದ್ದು ಹೆಚ್ಚಿನ ಮೊತ್ತಕ್ಕೆ ಅನುಮೋದನೆ ನೀಡುವ ಕುರಿತು.**

**ಠರಾವು:**

ಚರ್ಚೆಯ ನಂತರ, ಅಂದಾಜು ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ (ರೂ. 10.00 ಲಕ್ಷಕಿಂತ ಹೆಚ್ಚಿರುವುದು) ಈ ಕೆಳಕಂಡ ಉಪಕರಣವನ್ನು ಖರೀದಿಸಲು ಮಾನ್ಯ ಗೌರವಾನ್ವಿತ ವ್ಯವಸ್ಥಾಪನಾ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು :

| Sl. No. | Name of the Item | Indenting Dept. | Qty. | Approx. Cost in (In Lakhs) | Actual Cost after bidding | Funding Agency & Ab/Ac. No | Approval for (In Lakhs) |
|---|---|---|---|---|---|---|---|
| 1. | Interactive Panels & Accessories | Director of Education | 03 | 9.90 | 12.087 | ICAR-SAU grants (ICAR) 6953/701 | 12.087 |

**(ಕ್ರಮ : ಸರಕು ಖರೀದಿ ಅಧಿಕಾರಿ)**

**ಹೆಚ್ಚುವರಿ ಕಾರ್ಯಸೂಚಿ ಐಟಂ–3**

**ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರೇಕ್ಷಾಗೃಹದ ಬಾಡಿಗೆ ದರವನ್ನು ಹೆಚ್ಚಿಸಲು ಅನುಮೋದನೆ ನೀಡುವ ಕುರಿತು.**

**ಠರಾವು:**

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಮುಖ್ಯ ಆವರಣದ ಪ್ರೇಕ್ಷಾಗೃಹದ ಬಾಡಿಗೆ ದರವನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| ಕ್ರ.ಸಂ. | ಸಂಸ್ಥೆಗಳು | ಪ್ರಸ್ತುತ ದರ (ಪ್ರತಿ ದಿನಕ್ಕೆ) | ಪರಿಷ್ಕೃತ ದರ (ಪ್ರತಿ ದಿನಕ್ಕೆ) |
|---|---|---|---|
| 1 | ಸರಕಾರಿ ಸಂಸ್ಥೆಗಳು | ರೂ. 5000/– | ರೂ. 10,000/– |
| 2. | ಶಿಕ್ಷಣ ಸಂಸ್ಥೆಗಳಿಗೆ | –– | ರೂ. 15000/– |
| 3. | ಖಾಸಗಿಯವರಿಗೆ | ರೂ. 20,000/– | ರೂ. 30000/– |

**(ಕ್ರಮ : ಕುಲಸಚಿವರು)**

**ಹೆಚ್ಚುವರಿ ಕಾರ್ಯಸೂಚಿ ಐಟಂ–4**

**ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿವಿಧ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯಾಧಿಕಾರಿಗಳ ಸಂಚಿತ ವೇತನವನ್ನು ಪರಿಷ್ಕರಿಸಲು ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಶ್ವವಿದ್ಯಾಲಯದ ಮುಖ್ಯ ಆವರಣ ಹಾಗೂ ವಿವಿಧ ಆವರಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಸಂಚಿತ ವೇತನವನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| ಕ್ರ. ಸಂ. | ವೈದ್ಯರು | ಪ್ರಸ್ತುತ ದರ (ಪ್ರತಿ ತಿಂಗಳು) | ಪರಿಷ್ಕೃತ ದರ (ಪ್ರತಿ ತಿಂಗಳು) |
|---|---|---|---|
| 1 | ಪೂರ್ಣ ಪ್ರಮಾಣದ ಆಧಾರದ ಮೇಲಿನ **ವೈದ್ಯಾಧಿಕಾರಿಗಳಿಗೆ** | ರೂ. 40,000/– | ರೂ. 60,000/– |
| 2. | ಅರೆಕಾಲಿಕಾ ಆಧಾರದ ಮೇಲಿನ **ಬಿ.ಎ.ಎಂ.ಎಸ್ / ಬಿ.ಹೆಚ್.ಎಂ.ಎಸ್ ವೈದ್ಯರು** | ರೂ. 20,000/– | ರೂ. 25000/– |
| 3. | ಅರೆಕಾಲಿಕಾ ಆಧಾರದ ಮೇಲಿನ **ಎಂ.ಬಿ.ಬಿ.ಎಸ್. ವೈದ್ಯರು** | ರೂ. 20,000/– | ರೂ. 30000/– |

**(ಕ್ರಮ : ಕುಲಸಚಿವರು)**

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ/– 13–05–2022 | ಸಹಿ/– 13–05–2022 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ. ವೀರನಗೌಡ)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ. ವೀರನಗೌಡ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.